ಫ್ಯಾಕ್ಸ್-91-836-2446272
ಇ-ಮೇಲ್: deanpgs@uasd.in

ದೂರವಾಣಿ (ಕ)0836-2440947
2214213

# ಕೃಷಿ ವಿಶ್ವವಿದ್ಯಾಲಯ, ಧಾರವಾಡ,
## ಸ್ನಾತಕೋತ್ತರ ಶಿಕ್ಷಣ ನಿರ್ದೇಶನಾಲಯ, ಕೃಷಿ ನಗರ, ಧಾರವಾಡ-580 005

ಸಂ:ಶಿನಿ(ಸ್ನಾ)/ಡಿಪ್ಲೋಮಾ/೨೨೦ /2019-20

ದಿನಾಂಕ: 07-12-2019

**ಅಧಿಸೂಚನೆ**

ವಿಷಯ: Visiting Doctor ತಾತ್ಕಾಲಿಕ ಹುದ್ದೆಯ ನೇಮಕಾತಿ ಕುರಿತು.
ಉಲ್ಲೇಖ: ಕುಲಸಚಿವರು, ಕೃವಿವಿ, ಧಾರವಾಡ ಇವರ ಪರವಾನಿಗೆ ಮತ್ತು ಆಯ್ಕೆ ಸಮಿತಿ ಪತ್ರ
ಸಂಖ್ಯೆ:ಕುಸ:ನೇವಿ:ಸಂ.ವೈ:2019-20/4338-B ದಿನಾಂಕ: 25-11-2019

*************

ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಡಿಪ್ಲೋಮಾ (ಕೃಷಿ) ಕಾಲೇಜು ಕೊಣ್ಣೂರು ಆವರಣದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸುವ ಸಲುವಾಗಿ ಲೆಕ್ಕ ಶೀರ್ಷಿಕೆ 3608/310ರ ಅಡಿಯಲ್ಲಿ ತಾತ್ಕಾಲಿಕ ಆಧಾರದ ಮೇಲೆ ಸಂದರ್ಶಕ ವೈದ್ಯರ ಹುದ್ದೆಗೆ ನೇಮಕಾತಿಯನ್ನು ಮಾಡಲು ಈ ಕೆಳಗಿನ ವಿದ್ಯಾರ್ಹತೆ ಹೊಂದಿರುವ ವೈದ್ಯರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| Post | Educational Qualification | Number of Post | Period | Consolidated Salary |
|---|---|---|---|---|
| Visiting Doctor | M.B.B.S. or B.A.M.S. or B.H.M.S. with compulsory Internship Programme and should have Registration number from KMC. | 01 | 179 Days | Rs. 8000/- PM |

ವೈದ್ಯರುಗಳನ್ನು 179 ದಿವಸಗಳ ಅವಧಿಗೆ ಮೀರದಂತೆ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗುವುದು. ಸಂದರ್ಶನವು ದಿನಾಂಕ: **23-12-2019** ರಂದು **ಬೆಳಿಗ್ಗೆ 11.00 ಗಂಟೆಗೆ** ಪ್ರಾಚಾರ್ಯರು, ಡಿಪ್ಲೋಮಾ(ಕೃಷಿ) ಕಾಲೇಜು, ಕೊಣ್ಣೂರುದಲ್ಲಿ ನಡೆಯಲಿದೆ. ಸಂದರ್ಶನದಲ್ಲಿ ಹಾಜರಾಗುವ ವೈದ್ಯರುಗಳು ತಮ್ಮ ವಿದ್ಯಾರ್ಹತೆಯ ಮೂಲ ದಾಖಲೆಗಳನ್ನು ಹಾಗೂ ಅವುಗಳ ಎರಡು ಧೃಢೀಕೃತ ಪ್ರತಿಗಳನ್ನು ಸಂದರ್ಶನದ ಸಮಯದಲ್ಲಿ ತರಲು ತಿಳಿಸಲಾಗಿದೆ. ಯಾವುದೇ ಸಂದರ್ಭದಲ್ಲಿ ಅರ್ಜಿಯನ್ನು ಮುಂಗಡವಾಗಿ ಕಳುಹಿಸಬಾರದು.

ಸಂದರ್ಶನಕ್ಕೆ ಬರುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಬಂದು ಹಾಜರಾಗಬೇಕು. ಸದರಿ ನೇಮಕಾತಿಯು ತಾತ್ಕಾಲಿಕವಾಗಿರುವುದರಿಂದ ಯಾವುದೇ ಸಮಯದಲ್ಲಿ ಯಾವುದೇ ಕಾರಣ ತಿಳಿಸದೇ ತೆಗೆದುಹಾಕಲಾಗುವುದು ಹಾಗೂ ಕೃಷಿ ವಿಶ್ವವಿದ್ಯಾಲಯದಲ್ಲಿ ನೇರ ನೇಮಕಾತಿಗಾಗಿ ಯಾವುದೇ ತರಹದ ಹಕ್ಕಿಗೆ ಒಳಪಟ್ಟಿರುವುದಿಲ್ಲ.

9/12/19

ಡೀನ್ (ಸ್ನಾತಕೋತ್ತರ)
ಕೃಷಿ ವಿಶ್ವವಿದ್ಯಾಲಯ,
ಧಾರವಾಡ-580005

ಪ್ರತಿಯನ್ನು:

1. ಶಿಕ್ಷಣ ನಿರ್ದೇಶಕರು/ಕುಲಸಚಿವರು/ಹಣಕಾಸು ನಿಯಂತ್ರಣಾಧಿಕಾರಿಗಳು/ಆಡಳಿತಾಧಿಕಾರಿಗಳು, ಕೃವಿವಿ, ಧಾರವಾಡ.
2. ಗ್ರಂಥಪಾಲಕರು ಕೃವಿವಿ, ಧಾರವಾಡ-ಸದರಿ ವಿಷಯವನ್ನು ಎಲ್ಲರ ಸೂಕ್ತ ಮಾಹಿತಿಗಾಗಿ ಹಾಗೂ ವೆಬ್‌ಸೈಟ್‌ನಲ್ಲಿ ಪ್ರಚಾರಪಡಿಸಲು ಕೋರಲಾಗಿದೆ.
3. ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಧಾರವಾಡ/ಗದಗ-ಸದರಿ ವಿಷಯವನ್ನು ಎಲ್ಲರ ಸೂಕ್ತ ಮಾಹಿತಿಗಾಗಿ ಪ್ರಚಾರ ಮಾಡಲು ಕೋರಲಾಗಿದೆ.

ಪ್ರತಿಯನ್ನು ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕೃವಿವಿ, ಧಾರವಾಡ ಇವರಿಗೆ ಸದರಿ ವಿಷಯವನ್ನು ಮಾನ್ಯ ಕುಲಪತಿಗಳ ಗಮನಕ್ಕೆ ತರಲು ಕೋರಲಾಗಿದೆ.